ಪರಿಸರ ಪ್ರಜ್ಞೆ

# ಭೋಗಜೀವನ ಮತ್ತು ಭುವಿಯ ಭವಿಷ್ಯ

ಡಾ. ಎಚ್.ಆರ್. ಕೃಷ್ಣಮೂರ್ತಿ

**ಭಾರತೀಯ ಸಂಸ್ಕೃತಿಯು ಪ್ರಕೃತಿಯೊಡನೆ ಸಾಮರಸ್ಯದ ಬಾಳುವೆಯನ್ನು ಪ್ರತಿಪಾದಿಸುತ್ತದೆ. ಹೀಗಾಗಿ ಪರಿಸರವನ್ನು ಹಾಳು ಮಾಡುವ ಭೋಗಜೀವನವನ್ನು ತಿರಸ್ಕರಿಸುತ್ತದೆ. ಈ ಧೋರಣೆ ವೈಜ್ಞಾನಿಕವಾಗಿಯೂ ಸಮ್ಮತ ಎಂದು ಪ್ರತಿಪಾದಿಸಿರುವ ಲೇಖಕರು ಖ್ಯಾತ ಪರಿಸರ ವಿಜ್ಞಾನ ಲೇಖಕರು. ಈ ಹಿಂದೆ ಇವರು ಮೈಸೂರು ಆಕಾಶವಾಣಿ ನಿಲಯದ ನಿರ್ದೇಶಕರಾಗಿದ್ದರಲ್ಲದೆ ಪ್ರಸಾರ ಭಾರತಿಯ ಉಪಮಹಾ ನಿರ್ದೇಶಕರಾಗಿ, ಕಾರ್ಯ ನಿರ್ವಹಿಸಿ ಈಗ ನಿವೃತ್ತರಾಗಿದ್ದಾರೆ. ಪರಿಸರ ಶಿಕ್ಷಣ ಮತ್ತು ವಿಜ್ಞಾನ ಸಂವಹನ ಕ್ಷೇತಕ್ಕೆ ನೀಡಿರುವ ಅನುಪಮ ಕೊಡುಗೆಗಾಗಿ ಇವರಿಗೆ ಹಲವು ಪ್ರಶಸ್ತಿಗಳು ಸಂದಿವೆ.**

'ವಿಶಾಲ ವ್ಯೋಮದಲ್ಲಿ ತೇಲಿಬಿಟ್ಟಂತಿರುವ ನೀಲಿಬಣ್ಣದ ಪುಟ್ಟಗೋಳ. ಅದರ ಮೈಮೇಲೆ ಬಿಳಿ, ನೀಲಿ, ಕೆಂಪು, ಕಂದು ಮತ್ತು ಹಸಿರು ಬಣ್ಣದ ಚಿತ್ತಾರಗಳು' – ಇದು ದೂರದ ಬಾಹ್ಯಾಕಾಶದಲ್ಲಿ ವ್ಯೋಮನೌಕೆಯೊಂದರಲ್ಲಿ ಕುಳಿತು ಭೂಮಿಯನ್ನು ನೋಡುವ ಗಗನಯಾತ್ರಿಗೆ ಗೋಚರಿಸುವ ದೃಶ್ಯ. ವ್ಯೋಮನೌಕೆ ಭೂಮಿಯತ್ತ ಚಲಿಸಿದಂತೆ ಈ ಚಿತ್ತಾರಗಳು ಪರ್ವತ, ಮರುಭೂಮಿ, ಮೈದಾನ, ಜಲರಾಶಿಗಳಾಗುತ್ತವೆ. ಭೂಮಿ ಹತ್ತಿರವಾದಂತೆ ಈ ದೃಶ್ಯ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಅರಣ್ಯ, ಹುಲ್ಲುಗಾವಲು, ಕೃಷಿಭೂಮಿ, ಬೆಟ್ಟಗುಡ್ಡಗಳು, ನದಿ, ಸರೋವರ–ಸಾಗರಗಳಾಗಿ ಎದ್ದುಕಾಣುತ್ತವೆ. ಈ ಎಲ್ಲ ದೃಶ್ಯಗಳೂ ಮನಮೋಹಕವೇ! ಆದರೆ, ಈ ಗಗನಯಾತ್ರಿ ಭೂಮಿಯ ಮೇಲೆ ಕಾಲಿಟ್ಟು ಅಭಿವೃದ್ಧಿಶೀಲ ದೇಶಗಳ ನಗರ, ಪಟ್ಟಣಗಳನ್ನು ಪ್ರವೇಶಿಸುತ್ತಿದ್ದಂತೆ ದೂರದಿಂದ ಕಂಡ ಸ್ವರ್ಗ ಮಾಯವಾಗಿ ಮತ್ತೊಂದು ಪ್ರಪಂಚವೇ ತೆರೆದುಕೊಳ್ಳುತ್ತದೆ. ಇಲ್ಲಿ ಗೋಚರಿಸುವುದು ನಿರಂತರವಾಗಿ ಏರುತ್ತಿರುವ ಜನಸಂಖ್ಯೆ, ಅದರ ಕೊನೆಯಿಲ್ಲದ ಬೇಡಿಕೆಗಳು, ಈ ಬೇಡಿಕೆಗಳ ಪೂರೈಕೆಗಾಗಿ ಪ್ರಕೃತಿ–ಪರಿಸರಗಳ ಮೇಲೆ ನಡೆಯುತ್ತಿರುವ ನಿರಂತರ ಧಾಳಿ, ಅದರ ಪರಿಣಾಮವಾಗಿ ವಾಯುಮಾಲಿನ್ಯ, ಜಲಮಾಲಿನ್ಯ, ಅರಣ್ಯನಾಶ, ಸಾರ ಕಳೆದುಕೊಳ್ಳುತ್ತಿರುವ ಮಣ್ಣು, ಜೀವಿಪ್ರಭೇದಗಳ ಕಣ್ಮರೆ, ನಾಶವಾಗುತ್ತಿರುವ ಜೈವಿಕ ವೈವಿಧ್ಯ, ಏರುತ್ತಿರುವ ಭೂಮಿಯ ತಾಪ, ಹವಾಮಾನ ವೈಪರೀತ್ಯಗಳು, ಹೆಚ್ಚುತ್ತಿರುವ ಆರೋಗ್ಯದ ಸಮಸ್ಯೆಗಳು ಇತ್ಯಾದಿ ಇತ್ಯಾದಿ.

ಈ ಎಲ್ಲ ಸಮಸ್ಯೆಗಳನ್ನು ಹತ್ತಿರದಿಂದ ಗಮನಿಸುತ್ತಿರುವವರಿಗೆ ಮತ್ತು ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿಯುತ್ತಿರುವವರಿಗೆ ಮತ್ತೆ ಮತ್ತೆ ಎದುರಾಗುವ ಪ್ರಶ್ನೆಯೊಂದಿದೆ – ಪರಿಸರ ಸಂರಕ್ಷಣೆಗಾಗಿ ನಮ್ಮ ದೇಶದಲ್ಲಿ ೨೦೦ ಕ್ಕೂ ಹೆಚ್ಚು ಕಾನೂನುಗಳಿವೆ. ಪರಿಸರ ಮಾಲಿನ್ಯದ ಪ್ರಕರಣಗಳನ್ನು ಗುರುತಿಸಿ, ಕಾನೂನುರೀತ್ಯಾ ಕ್ರಮ ಜರುಗಿಸುವ ಅಧಿಕಾರವುಳ್ಳ ಮಂಡಲಿಗಳಿವೆ. ಮಾಲಿನ್ಯವನ್ನು ನಿಯಂತ್ರಿಸುವ ತಂತ್ರಜ್ಞಾನವಿದೆ. ಶಾಲಾ, ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಪರಿಸರ ಸಂರಕ್ಷಣೆಯ ಪಾಠಗಳಿವೆ. ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಅವಿರತವಾಗಿ ನಡೆದಿದೆ. ವರ್ಷವಿಡೀ ಸಭೆ, ಸಮಾರಂಭ, ಕಾರ್ಯಾಗಾರ, ಚರ್ಚಾಗೋಷ್ಠಿ, ವಿಚಾರಸಂಕಿರಣಗಳು ನಡೆಯುತ್ತಲೇ ಇರುತ್ತವೆ. ಆದರೆ, ಈ ಎಲ್ಲ ಚಟುವಟಿಕೆಗಳ ನಡುವೆಯೂ ಪರಿಸರದ ಗುಣಮಟ್ಟ ಮಾತ್ರ ಹದಗೆಡುತ್ತಲೇ ಹೋಗುತ್ತಿದೆ. ಏಕೆ ಹೀಗೆ? ಇದಕ್ಕೇನು ಕಾರಣ?

ಪರಿಸರಮಾಲಿನ್ಯದ ಪ್ರಾರಂಭದ ದಿನಗಳಿಂದಲೂ ಪರಿಣತರು ಈ ಪ್ರಶ್ನೆಗೆ ಉತ್ತರ ನೀಡುತ್ತಲೇ ಬಂದಿದ್ದಾರೆ. ಅವರು ನೀಡುವ ಒಂದೇ ರೀತಿಯ ಉತ್ತರಗಳಿಂದ ಅನೇಕ ಸಂದರ್ಭಗಳಲ್ಲಿ ಗೊಂದಲ ತಲೆದೋರುವುದೂ ಉಂಟು. ಈ ಪರಿಣತ ವಿಜ್ಞಾನಿಗಳ ಬದಲಾಗಿ, ಯಾವ ರೀತಿಯ ಪೂರ್ವಗ್ರಹಕ್ಕೂ ಒಳಗಾಗದೆ ಯೋಚಿಸಬಲ್ಲ ಕಿರಿಯರನ್ನು ಕೇಳುವ ಹೊಸ ಪರಿಪಾಠ ಸುಮಾರು ಎರಡು ದಶಕಗಳಿಂದೀಚೆಗೆ ನಡೆದುಬಂದಿದೆ. ಅವರ ಉತ್ತರಗಳು ನಮ್ಮ ಭೂಮಿಯನ್ನು ಉಳಿಸಿಕೊಳ್ಳುವ ಹೊಸ ಭರವಸೆಯ ದಾರಿಗಳನ್ನೂ ತೋರಿಸಿವೆ.

೧೯೯೨, ಜೂನ್ ತಿಂಗಳಿನಲ್ಲಿ ಬ್ರೆಜಿಲ್ ದೇಶದ ರಿಯೋ ಡಿ ಜನೈರೋದಲ್ಲಿ ನಡೆದ 'ಪೃಥ್ವೀ ಸಮ್ಮೇಳನ' (Earth Summit) ನಿಮಗೆ ನೆನಪಿರಬಹುದು. ಈ ಜಾಗತಿಕ ಸಮ್ಮೇಳನಕ್ಕೆ ದೊರೆತ ಪ್ರಚಾರ ಅಷ್ಟಿಷ್ಟಲ್ಲ. ಈ ಪೃಥ್ವೀ ಸಮ್ಮೇಳನಕ್ಕಿಂತ ಎಲ್ಲ ವಿಧಗಳಲ್ಲೂ ಸಂಪೂರ್ಣ ಭಿನ್ನವಾಗಿದ್ದ ಮತ್ತೊಂದು ಮಹತ್ವಪೂರ್ಣ ಕಾರ್ಯಕ್ರಮ ೧೯೯೫ರಲ್ಲಿ ಸದ್ದುಗದ್ದಲವಿಲ್ಲದೇ ನಡೆಯಿತು. ದೊಡ್ಡವರಿಗೆ ಇಲ್ಲಿ ಪ್ರವೇಶವೇ ಇರಲಿಲ್ಲ. ಇಲ್ಲಿದ್ದವರೆಲ್ಲರೂ ಮಕ್ಕಳೇ! ೧೦೦ ದೇಶಗಳ ೧೦,೦೦೦ ಮಕ್ಕಳು ತಾವಿದ್ದ ಜಾಗದಿಂದಲೇ, ಪೃಥ್ವೀ ಸಮ್ಮೇಳನದಲ್ಲಿ ಚರ್ಚೆಗೆ ಬಂದಿದ್ದ ಅನೇಕ ಸಮಸ್ಯೆಗಳ ಬಗ್ಗೆ, ತಮ್ಮದೇ ಆದ ಮುಕ್ತ ಆಲೋಚನೆಗಳನ್ನು, ಕಥೆ, ಕವನ, ಚಿತ್ರ, ಲೇಖನಗಳ ಮೂಲಕ ವ್ಯಕ್ತಪಡಿಸಿದರು; ಪರಿಹಾರ ಮಾರ್ಗಗಳನ್ನು ಸೂಚಿಸಿದರು. ಹೊಸ ಕಲ್ಪನೆ, ಹೊಸ ಪರಿಹಾರಗಳ ಮಹಾಪೂರವೇ ಅಲ್ಲಿ ಹರಿಯಿತು.



ಇದಾದನಂತರ ೨೦ ದೇಶಗಳಿಂದ ಬಂದಿದ್ದ ೨೮ ಹುಡುಗರನ್ನು ಆರಿಸಿ, ಇಂಗ್ಲೆಂಡಿನ ಹೆಟ್‌ಫೋರ್‌ಶೈರ್ ಎಂಬಲ್ಲಿ ಅವರನ್ನು ಸೇರಿಸಲಾಯಿತು. ೧೦,೦೦೦ ಮಕ್ಕಳು ಸಂಗ್ರಹಿಸಿದ್ದ ಅಪಾರ ಮಾಹಿತಿಯನ್ನು ವಿಂಗಡಿಸಿ, ವಿಶ್ಲೇಷಿಸಿ, ಸಂಪಾದಿಸುವ ಹೊಣೆಯನ್ನು ಅವರಿಗೆ ನೀಡಲಾಯಿತು. ಅತ್ಯುತ್ಸಾಹದಿಂದ, ನುರಿತ ಸಂಪಾದಕರಂತೆ, ಮಕ್ಕಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರು. ಅದರ ಫಲವೇ Rescue Mission : Planet Earth ಎಂಬ ಗ್ರಂಥ. ಪ್ರಪಂಚದ ಮಕ್ಕಳು ಸಿದ್ಧಪಡಿಸಿರುವ ಈ ಪುಸ್ತಕ ನಮ್ಮ ಪಾಲಿಗಿರುವ ಏಕೈಕ ಭೂಮಿಯನ್ನು ಮತ್ತಷ್ಟು ಮಲಿನವಾಗದಂತೆ ಉಳಿಸಿಕೊಳ್ಳುವ ಮಾರ್ಗವನ್ನು ಸಮರ್ಥವಾಗಿ ತೋರಿಸುತ್ತದೆ.

Rescue Mission : Planet Earth – ಇದು ಸಂಪೂರ್ಣವಾಗಿ ಮಕ್ಕಳಿಂದಲೇ ಸಿದ್ಧವಾಗಿರುವ ಕೃತಿ. ಲೇಖನಗಳು, ವಿವರಣೆಗಳು, ಚಿತ್ರಗಳು, ಪುಸ್ತಕದ ವಿನ್ಯಾಸ – ಈ ಎಲ್ಲವನ್ನೂ ಮಕ್ಕಳೇ ಮಾಡಿದ್ದಾರೆ. ಪುಸ್ತಕದಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯದರಲ್ಲಿ ಪ್ರಕೃತಿಗೆ ಸಂಬಂಧಿಸಿದ ಸಮಸ್ಯೆಗಳ ಪ್ರಸ್ತಾವ ಇದೆ. ಎರಡನೆಯದರಲ್ಲಿ ಮಾನವನಿರ್ಮಿತ ಸಮಸ್ಯೆಗಳ ವಿವೇಚನೆ, ಅವುಗಳಿಗೆ ಪರಿಹಾರಗಳಿವೆ. ಮೂರು ಮತ್ತು ನಾಲ್ಕನೆಯ ಭಾಗಗಳಲ್ಲಿ ಸರ್ಕಾರ ಮತ್ತು ಸ್ವಯಂಸೇವಾಸಂಘಗಳ ಪಾತ್ರ, ಪರಿಸರ ಸಂರಕ್ಷಣೆಗಾಗಿ ಮಕ್ಕಳೇ ಮಾಡಬಹುದಾದ ಕೆಲಸಗಳ ಮಾಹಿತಿಯಿದೆ. ಹಸಿರು ಮನೆ ಪರಿಣಾಮ, ತೆಳುವಾಗುತ್ತಿರುವ ಓಜೋನ್ ಪದರ ಮುಂತಾದುವುಗಳನ್ನು ಸರಳವಾಗಿ ವಿವರಿಸುವುದರ ಜೊತೆಗೆ ಜನಸಂಖ್ಯಾ ಸ್ಫೋಟ, ಬಡತನ ಮುಂತಾದ ಸಮಸ್ಯೆಗಳನ್ನು ಮಕ್ಕಳು ತಮ್ಮದೇ ಆದ ದೃಷ್ಟಿಯಿಂದ ನೋಡಿದ್ದಾರೆ. ತೀರಾ ಸರಳವೆನಿಸುವ, ಆದರೆ ಪರಿಣಾಮಕಾರಿಯಾಗಬಲ್ಲ ಪರಿಹಾರಗಳನ್ನೂ ಅವರು ಸೂಚಿಸಿದ್ದಾರೆ.

ಪರಿಸರದ ಗುಣಮಟ್ಟ ನಿರಂತರವಾಗಿ ಏಕೆ ಹದಗೆಡುತ್ತಿದೆ ಎಂಬ ಪ್ರಶ್ನೆಗೆ ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಉತ್ತರಿಸಿದ್ದಾರೆ. ಅದರ ಸಾರಾಂಶ ಇಷ್ಟು : ಹೆಚ್ಚುತ್ತಿರುವ ಪರಿಸರ ಮಾಲಿನ್ಯಕ್ಕೆ ಅತಿ ಮುಖ್ಯ ಕಾರಣವೆಂದರೆ ನಮ್ಮ ಜೀವನವಿಧಾನ; ಬೇಡಿಕೆಗಳಿಗೆ ಕಡಿವಾಣ ಹಾಕದೇ ಭೋಗವಸ್ತುಗಳ ಬೆನ್ನು ಹತ್ತಿ ಓಡುತ್ತಿರುವ ನಮ್ಮ ಜೀವನಶೈಲಿ. ಯಾವುದೇ ವಸ್ತುವನ್ನು ಕೊಳ್ಳುವ ಮುನ್ನ ಅದು ಎಷ್ಟು ಅಗತ್ಯವೆಂದು ಯೋಚಿಸಿ ನೋಡಿ. ಅಗತ್ಯವಿಲ್ಲದೆ ಯಾವ ವಸ್ತುವನ್ನೂ ಕೊಳ್ಳಬೇಡಿ. ವಸ್ತುವೊಂದನ್ನು ಕೊಳ್ಳಬೇಕಾಗಿ ಬಂದಾಗ ಅದರ ಉತ್ಪಾದನೆಯ ವಿವಿಧ ಹಂತಗಳಲ್ಲಿ ಪರಿಸರದ ಮೇಲಾಗಿರುವ ವಿಪರೀತ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಕೊಂಡುಕೊಂಡ ವಸ್ತು, ಬಳಕೆಯ ನಂತರ ತ್ಯಾಜ್ಯ ಪದಾರ್ಥವಾದಾಗ ಅದು ಪರಿಸರದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚಿಂತಿಸಿ. ಆಯ್ಕೆಯ ಸಾಧ್ಯತೆಗಳಿದ್ದಾಗ ಪರಿಸರಕ್ಕೆ ಮಾರಕವಾಗದ, ಪರಿಸರಸ್ನೇಹಿ ಪದಾರ್ಥಗಳನ್ನೇ ಖರೀದಿಸಿ. ಇದರಿಂದ ಪ್ರಾಥಮಿಕ ಹಂತದಲ್ಲೇ ಮಾಲಿನ್ಯವನ್ನು ತಡೆಯಬಹುದು.

ಮಕ್ಕಳು ಸೂಚಿಸಿರುವ ಈ ಸರಳ ಪರಿಹಾರದ ಮಹತ್ವ ತಿಳಿಯಬೇಕಾದಲ್ಲಿ ಆಧುನಿಕ ಜನರ ಜೀವನಶೈಲಿಯತ್ತ ನಾವು ಗಮನ ಹರಿಸಬೇಕಾಗುತ್ತದೆ. ಪ್ರಪಂಚದ ಸುಮಾರು ಮುಕ್ಕಾಲು ಭಾಗ ಸಂಪತ್ತನ್ನು ಕೆಲವೇ ಕೆಲವು ಶ್ರೀಮಂತ ರಾಷ್ಟ್ರಗಳ ಜನ ಬಳಸುತ್ತಾರೆ. ಉಳಿದ ಕಾಲು ಭಾಗ ಸಂಪನ್ಮೂಲಕ್ಕೆ ಬಡರಾಷ್ಟ್ರಗಳು ಮುಗಿಬೀಳುತ್ತವೆ. ಪ್ರಪಂಚದ ಒಟ್ಟು ಜನಸಂಖ್ಯೆಯ ಶೇಕಡ ೫ ಭಾಗ ಅಮೆರಿಕದಲ್ಲಿದೆ. ಆದರೆ ಪ್ರಪಂಚದ ವಾರ್ಷಿಕ ತೈಲೋತ್ಪಾದನೆಯ ಶೇಕಡ ೨೬ರಷ್ಟನ್ನು ಅಲ್ಲಿಯ ಜನ ಬಳಸುತ್ತಾರೆ. ಅಮೆರಿಕದ ಒಬ್ಬ ಸಾಮಾನ್ಯ ಪ್ರಜೆ ಪ್ರತಿದಿನವೂ ಉಪಯೋಗಿಸುವ ವಿವಿಧ ವಸ್ತುಗಳ ರಾಶಿ ಸುಮಾರು ೫೨ ಕಿಲೋಗ್ರಾಮ್ ಇರುತ್ತದೆ. ಇದರಲ್ಲಿ ೧೮ ಕಿಲೋಗ್ರಾಮ್ ಪೆಟ್ರೋಲಿಯಮ್ ಮತ್ತು ಕಲ್ಲಿದ್ದಿಲು, ೧೩ ಕಿಲೋಗ್ರಾಮ್ ಖನಿಜಗಳು, ೧೨ ಕಿಲೋಗ್ರಾಮ್ ಕೃಷಿ ಉತ್ಪನ್ನಗಳು ಮತ್ತು ೯ ಕಿಲೋಗ್ರಾಮ್ ಅರಣ್ಯಾಧಾರಿತ ವಸ್ತುಗಳು ಇರುತ್ತವೆ.

ಇವುಗಳ ಉತ್ಪಾದನೆಗೆ ಬೇಕಾಗುವ ಕಚ್ಚಾವಸ್ತುಗಳು ಪ್ರಪಂಚದ ಬೇರೆ ಬೇರೆ ಭಾಗಗಳಿಂದ ಬರುತ್ತವೆ. ಪ್ರಕೃತಿಯಿಂದ ಈ ಕಚ್ಚಾವಸ್ತುಗಳನ್ನು ಪಡೆಯುವ ಪ್ರತಿ ಹಂತದಲ್ಲೂ ಪರಿಸರಮಾಲಿನ್ಯ ತಪ್ಪಿದ್ದಲ್ಲ. ಆದರೆ ಈ

ಭೋಗವಸ್ತುಗಳ ಸುಖ ಶ್ರೀಮಂತ ದೇಶಗಳಿಗೆ, ಮಾಲಿನ್ಯ ಮಾತ್ರ ಬಡದೇಶಗಳಿಗೆ. ಅಮೆರಿಕದಲ್ಲಿ ಗೋಮಾಂಸಕ್ಕೆ ಬೇಡಿಕೆ ಹೆಚ್ಚಾದರೆ ಅಮೆಜಾನ್ ಮಳೆ ಅರಣ್ಯಗಳು ಬಯಲಾಗುತ್ತವೆ; ಪಶುಸಂಗೋಪನೆ ಕೇಂದ್ರಗಳು ತಲೆಯೆತ್ತುತ್ತವೆ. ಕಣ್ಮರೆಯಾದ ಅರಣ್ಯದೊಂದಿಗೆ ಅದನ್ನೇ ಆಧರಿಸಿದ್ದ ಜನ ಬೀದಿಪಾಲಾಗುತ್ತಾರೆ. ಸಂಪನ್ಮೂಲಗಳ ಅತಿ ಬಳಕೆ ದೊಡ್ಡವರಿಗಷ್ಟೇ ಸೀಮಿತವಾಗಿಲ್ಲ. ಮಕ್ಕಳನ್ನೂ ಅದೇ ರೀತಿ ಬೆಳೆಸಲಾಗುತ್ತದೆ. ಅಮೆರಿಕದ ಪ್ರತಿಯೊಂದು ಮಗು ತಾನು ಬಳಸುವ ವಸ್ತುಗಳಿಂದ ಉಂಟುಮಾಡುವ ಪರಿಸರಮಾಲಿನ್ಯವು ಸ್ವೀಡನ್ ಮಗುವಿನ ಎರಡರಷ್ಟು, ಇಟಲಿ ಮಗುವಿನ ಮೂರರಷ್ಟು, ಬ್ರೆಜಿಲ್ ಮಗುವಿನ ೧೩ ರಷ್ಟು, ಭಾರತದ ೩೫ ರಷ್ಟು, ಹೈಟಿ ದೇಶದ ಮಗುವಿನ ೨೮೦ ರಷ್ಟು ಇದೆ. ಒಬ್ಬ ಸ್ವಿಸ್ ಪ್ರಜೆ ಬಳಸುವ ಸಂಪನ್ಮೂಲಗಳಿಂದ ಸೋಮಾಲಿಯಾದ ४೦ ಜನ ಬದುಕುತ್ತಾರೆ. ಅಭಿವೃದ್ಧಿಶೀಲ ರಾಷ್ಟ್ರದ ಪ್ರಜೆಗಳಿಗೆ ಹೋಲಿಸಿದರೆ ಶ್ರೀಮಂತ ರಾಷ್ಟ್ರಗಳ ಜನ ಪ್ರತಿದಿನವೂ ೧೦ ಪಟ್ಟು ಹೆಚ್ಚು **ಇಂಧನ,** ೩ ಪಟ್ಟು ಹೆಚ್ಚು **ನೀರು** ಮತ್ತು ೧೯ ಪಟ್ಟು ಹೆಚ್ಚು **ಅಲ್ಯುಮಿನಿಯಮ್** ಬಳಸುತ್ತಾರೆ.

ಪ್ರಕೃತಿ ಸಂಪನ್ಮೂಲಗಳ ಅತಿ ಬಳಕೆಯಿಂದಾಗುವ ಪರಿಸರಮಾಲಿನ್ಯದಲ್ಲಿ ಬಡ ರಾಷ್ಟ್ರಗಳ ಪಾತ್ರವೂ ಇಲ್ಲದಿಲ್ಲ. ಹಾಗೆ ನೋಡಿದರೆ ಪ್ರಪಂಚದ ಅಭಿವೃದ್ಧಿಶೀಲ ದೇಶಗಳ ಶ್ರೀಮಂತರ ಜೀವನಶೈಲಿ ಶ್ರೀಮಂತದೇಶಗಳ ಶ್ರೀಮಂತರಿಗಿಂತ ಯಾವ ವಿಧದಲ್ಲೂ ಭಿನ್ನವಾಗಿಲ್ಲ. ಬೆಂಗಳೂರು, ಮೈಸೂರಿನ ಶ್ರೀಮಂತರು ತಮ್ಮ ಕಾರನ್ನು ಒಂದು ಬಾರಿ ತೊಳೆಯಲು ಬಳಸುವ ನೀರಿನಲ್ಲಿ, ಗುಲ್ಬರ್ಗಾ ಜಿಲ್ಲೆಯ ಹಳ್ಳಿಯ ಕುಟುಂಬದ ಒಂದು ದಿನದ ನೀರಿನ ಬೇಡಿಕೆಯನ್ನು ಪೂರೈಸಬಹುದು. ಅವರಿವರ ಮಾತು ಬಿಡಿ! ನಮ್ಮ, ನಿಮ್ಮ ದಿನನಿತ್ಯದ ಜೀವನದಲ್ಲಿ ಸಂಪನ್ಮೂಲಗಳನ್ನು ಬಳಸಿಕೊಳ್ಳುವಾಗ ಯಾವ ಹೆಚ್ಚಿನ ಎಚ್ಚರಿಕೆಯನ್ನೂ ನಾವು ತೋರುವುದಿಲ್ಲ. ಈ ಮಾತನ್ನು ಒಪ್ಪದಿದ್ದರೆ ನೀವೇ ಪರೀಕ್ಷಿಸಿ ನೋಡಿ. ನಿಮ್ಮ ಮನೆಯಲ್ಲಿರುವ ಸಾಧನ ಸಲಕರಣೆಗಳಲ್ಲಿ ಎಷ್ಟು ನಿಮಗೆ ತೀರಾ ಅಗತ್ಯ, ಎಷ್ಟು ಕೇವಲ ಅಂತಸ್ತಿನ ಸಂಕೇತ? ನೀರು, ವಿದ್ಯುತ್, ಕಾಗದಗಳನ್ನು ಬಳಸುವಾಗ ನೀವು ಮಿತಬಳಕೆಯ ಬಗ್ಗೆ ಯೋಚಿಸಿದ್ದೀರಾ? ಶುದ್ಧವಾದ ಕುಡಿಯುವ ನೀರಿನ ಬದಲಿಗೆ, ಹಣ್ಣು, ತರಕಾರಿ, ಆಹಾರ ಪದಾರ್ಥಗಳನ್ನು ತೊಳೆಯಲು ಬಳಸಿದ ನೀರನ್ನು ಗಿಡಮರಗಳಿಗೆ ಹಾಕಿದ್ದುಂಟೆ? ವ್ಯರ್ಥವೆಂದು ಹೊರಗೆಸೆಯುವ ಮುನ್ನ ಎಷ್ಟು ವಸ್ತುಗಳನ್ನು ನೀವು ಪುನರ್ಬಳಸಿದ್ದೀರಿ? ನೀವು ಎಸೆಯುವ ವ್ಯರ್ಥ ಪದಾರ್ಥಗಳಲ್ಲಿ ಸಸ್ಯಮೂಲದ ವಸ್ತುಗಳನ್ನು ಬೇರ್ಪಡಿಸಿ ಉತ್ತಮ ಕಾಂಪೋಸ್ಟ್ ಗೊಬ್ಬರವನ್ನಾಗಿ ಪರಿವರ್ತಿಸಬಹುದೆಂಬುದು ನಿಮಗೆ ತಿಳಿದಿದೆಯೇ? ಮನೆಯ ಕಸವನ್ನು ಬೀದಿಗೆಸೆಯದೆಯೇ ತೊಟ್ಟಿಗೆ ಹಾಕುವ ಅಭ್ಯಾಸ ನಿಮಗಿದೆಯೇ? ಪರಿಸರ ಸಂರಕ್ಷಣೆಯ ಕಾನೂನುಗಳ ಬಗ್ಗೆ ಸ್ಥೂಲವಾಗಿಯಾದರೂ ನಿಮಗೆ ತಿಳಿದಿದೆಯೇ? ನಿಮ್ಮ ಮಕ್ಕಳಿಗೆ ಪ್ರಕೃತಿ, ಪರಿಸರಗಳ ಬಗ್ಗೆ ಪ್ರೀತಿ, ಆಸಕ್ತಿ ಮೂಡಿಸುವಂತಹ ಯಾವ ಹವ್ಯಾಸವನ್ನು ನೀವು ಕಲಿಸಿದ್ದೀರಿ? ಅಭಯಾರಣ್ಯ, ರಾಷ್ಟ್ರೀಯ ಉದ್ಯಾನವನ, ಸಾಗರ, ನದೀತೀರಗಳಿಗೆ ವಿಹಾರಾರ್ಥವಾಗಿ ಹೋದಾಗ ಅಲ್ಲಿನ ಪರಿಸರವನ್ನು ಹಾಳುಗೆಡವಿ ಶಾಂತಿ, ನೆಮ್ಮದಿಗಳನ್ನು ಕೆಡಿಸದಂತೆ ನೀವು ನಡೆದುಕೊಂಡಿದ್ದೀರಾ?

Rescue Mission : Planet Earth ಗ್ರಂಥ ಮೊಟ್ಟಮೊದಲಿಗೆ ಪ್ರಕಟವಾದದ್ದು ೧೯೯೩ ರಲ್ಲಿ. ಅಂದಿನಿಂದ ಹೆಚ್ಚುಕಡಿಮೆ ಪ್ರತಿವರ್ಷವೂ ಅಂತಹುದೇ ಒಂದಾದರೂ ಗ್ರಂಥ ಪ್ರಕಟವಾಗುತ್ತಾ ಬಂದಿದೆ. ಅಷ್ಟೇ ಅಲ್ಲ, ಪ್ರತಿಯೊಂದು ದೇಶವೂ ಈ ರೀತಿಯ ಕೃತಿಯನ್ನು ಸಿದ್ಧಪಡಿಸುತ್ತಾ ಬಂದಿದೆ. ಈ ರೀತಿಯ ಗ್ರಂಥಗಳಲ್ಲಿ ಮಕ್ಕಳು ಕೇಳುತ್ತಾ ಬಂದಿರುವ ಪ್ರಶ್ನೆಗಳಿಗೆ, ವಯಸ್ಸಿನಲ್ಲಿ ಮಾತ್ರ ಹಿರಿಯರಾದ ನಾವು ಪ್ರಾಮಾಣಿಕವಾಗಿ ಉತ್ತರಿಸಬಲ್ಲೆವೇ? ಪ್ರಯತ್ನಿಸಿ ನೋಡಿ! ಭೋಗಜೀವನವು ಅತಿ ಬಳಕೆಗೆ ದಾರಿ ಮಾಡಿಕೊಟ್ಟು ಪ್ರಕೃತಿಯನ್ನು ರೋಗಗ್ರಸ್ತವನ್ನಾಗಿ ಮಾಡುತ್ತದೆಂಬ ವಿಷಯ ಸ್ಪಷ್ಟವಾಗಿ ತಿಳಿದಿದ್ದರೂ, ಅದೇ ದಾರಿಯಲ್ಲಿ ನಾವು ಭರದಿಂದ ಮುನ್ನಡೆಯುತ್ತಿದ್ದೇವೆಂಬುದು ಬಹು ದೊಡ್ಡ ವಿಪರ್ಯಾಸ. ಸಮೂಹಮಾಧ್ಯಮಗಳು, ಅದರಲ್ಲೂ ಹೆಚ್ಚಾಗಿ ದೃಶ್ಯಮಾಧ್ಯಮವಾದ ಟಿ.ವಿ. ಚಾನೆಲ್‌ಗಳು ಭೋಗ ಜೀವನವೇ ಪರಮಾದರ್ಶ ಎನ್ನುವಂತಹ ಜಾಹೀರಾತುಗಳನ್ನು ಪ್ರತಿದಿನ, ಪ್ರತಿಕ್ಷಣ ಪ್ರಸಾರ ಮಾಡುತ್ತಿವೆ. ಕೊಳ್ಳುಬಾಕತನ [consumerism] ಹೆಚ್ಚು ಜನಪ್ರಿಯವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪರಿಸರದ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಹದಗೆಡದೆ ಮತ್ತೇನಾದೀತು?

ನಮಗಿರುವುದು ಒಂದೇ ಭೂಮಿ. ನಾವು ಪ್ರತಿನಿತ್ಯ ಬಳಸುವ ಸಮಸ್ತ ವಸ್ತುಗಳೂ ಈ ಭೂಮಿಯಿಂದಲೇ ಒದಗಿ ಬರಬೇಕು. ಶುದ್ಧವಾದ ಗಾಳಿ, ನೀರು, ವಿವಿಧ ಆಹಾರಪದಾರ್ಥಗಳು, ಬಟ್ಟೆ, ಖನಿಜಗಳು, ಕೈಗಾರಿಕಾ ಕಚ್ಚಾ ವಸ್ತುಗಳು, ಪೆಟ್ರೋಲಿಯಮ್, ಕಲ್ಲಿದ್ದಿಲು, ಬೆಲೆಬಾಳುವ ಚೌಬೀನೆ, ಸೌದೆ, ಮೇವು, ರಾಳ, ನಾರು, ಗೋಂದು, ಔಷಧಸಾಮಗ್ರಿಗಳು ಮುಂತಾದ ನೂರಾರು ವಸ್ತುಗಳಿಗೆ ಈ ಭೂಮಿಯ ಮೇಲಿರುವ ಅರಣ್ಯ, ನೀರು, ನೆಲಗಳೇ ಆಧಾರವಾಗಿವೆ. ಆದರೆ ಈ ವೈವಿಧ್ಯಪೂರ್ಣ ವಸ್ತುಗಳನ್ನು ಒದಗಿಸುವ ಭೂಮಿ ಒಂದು ಅಕ್ಷಯಪಾತ್ರೆಯಲ್ಲ; ಅದು ತ್ವರಿತಗತಿಯಲ್ಲಿ ಬರಿದಾಗುತ್ತಿದೆ. ನಮ್ಮ ಭೂಮಿ ಪ್ರತಿ ವರ್ಷ ಎಷ್ಟು ಸಂಪತ್ತನ್ನು ಉತ್ಪಾದಿಸುತ್ತದೆ, ನಾವು ಅದನ್ನು

ಯಾವ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದ್ದೇವೆ ಎಂಬುದನ್ನು ನಿಖರವಾಗಿ ಸೂಚಿಸಲು Ecological Foot-print ಅರ್ಥಾತ್ 'ಜೀವಿಪರಿಸ್ಥಿತಿ ಹೆಜ್ಜೆಗುರುತು' ಎಂಬ ಪರಿಕಲ್ಪನೆಯನ್ನು ಕಳೆದ ಮೂರು ವರ್ಷಗಳಿಂದೀಚೆಗೆ ಬಳಕೆಗೆ ತರಲಾಗಿದೆ. ನಮ್ಮ ಅಭಿವೃದ್ಧಿ ಚಟುವಟಿಕೆಗಳು ಭೂಮಿಯ ಸಂಪನ್ಮೂಲವನ್ನು ಹೇಗೆ ಬಳಸಿಕೊಳ್ಳುತ್ತಿವೆ ಎಂಬುದನ್ನು ಇದು ಸೂಚಿಸುತ್ತದೆ. ಉದಾಹರಣೆಗೆ, ಪ್ರಪಂಚದ ಒಟ್ಟು ಜನಸಂಖ್ಯೆ ೬೯೧ ಕೋಟಿ, ಒಂದು ವರ್ಷದ ಅವಧಿಯಲ್ಲಿ ಇವರು ಬಳಸುವ ಒಟ್ಟು ಸಂಪನ್ಮೂಲವನ್ನು ಉತ್ಪಾದಿಸಲು ಭೂಮಿಗೆ ೧.೬ ವರ್ಷ ಬೇಕು. ಅಂದರೆ ನಮ್ಮ ಭೂಮಿ ಅಥವಾ ಪ್ರಕೃತಿ ೧.೬ ವರ್ಷಗಳಲ್ಲಿ ಉತ್ಪಾದಿಸುವ ಪದಾರ್ಥಗಳನ್ನು ನಾವು ಒಂದೇ ವರ್ಷದಲ್ಲಿ ಬಳಸಿ ಮುಗಿಸುತ್ತಿದ್ದೇವೆ. ಅಂದರೆ ನಮ್ಮ ಬಳಕೆಯ ವೇಗ ಉತ್ಪಾದನೆಗಿಂತ ಬಹಳಷ್ಟು ಹೆಚ್ಚಾಗಿದೆ. ಈ ಬಳಕೆ ಮತ್ತು ಉತ್ಪಾದನೆಗಳ ನಡುವಿನ ಕೊರತೆಯನ್ನು ತುಂಬಲು ನಮ್ಮ ಪ್ರಕೃತಿ ಈಗಾಗಲೇ ಉತ್ಪಾದಿಸಿ, ಸಂಗ್ರಹಿಸಿಟ್ಟಿರುವ ಸಂಪನ್ಮೂಲವನ್ನು – ಅರಣ್ಯಗಳು, ನದಿ ಸಾಗರಗಳಲ್ಲಿನ ಜೀವಿಗಳು, ಮೇಲ್ಮಣ್ಣು, ನೆಲದಲ್ಲಿನ ಸಾರ, ಪೆಟ್ರೋಲ್, ಕಲ್ಲಿದ್ದಿಲು ಇತ್ಯಾದಿ – ನಾವು ಬರಿದು ಮಾಡುತ್ತಿದ್ದೇವೆ. ಇದು ಭೋಗಜೀವನದ ಪರಿಣಾಮವಾಗಿ ಕಂಡುಬರುತ್ತಿರುವ ಅತ್ಯಂತ ಅಪಾಯಕಾರಿ ಬೆಳವಣಿಗೆ. ಪ್ರಪಂಚದ ಬಹುತೇಕ ರಾಷ್ಟ್ರಗಳ ಜನರಿಗೆ ಅಮೆರಿಕದ ಜೀವನಶೈಲಿಯೇ ಮಾದರಿ; ಅಂತಹ ಜೀವನ ಶೈಲಿಯನ್ನು ಸಾಧಿಸುವುದೇ ಅಭಿವೃದ್ಧಿ! ಪ್ರಪಂಚದ ಎಲ್ಲ ಜನರೂ ಅಮೆರಿಕನ್ನರಂತೆಯೇ ಸಂಪನ್ಮೂಲಗಳನ್ನು ಬಳಸಲು ಪ್ರಾರಂಭಿಸಿದ್ದೇ ಆದರೆ, ಅವರೆಲ್ಲರ ಬೇಡಿಕೆಗಳನ್ನು ಪೂರೈಸಲು ನಾಲ್ಕು ಭೂಮಿಗಳು ಬೇಕಾಗುತ್ತವೆ! ಆದರೆ ನಮಗಿರುವುದು ಒಂದೇ ಭೂಮಿ!

ನಮ್ಮ ಪ್ರಾಚೀನ ಸಂಸ್ಕೃತಿಯ ಪ್ರಾರ್ಥನೆಯೊಂದು, ಬೆಳಗಾಗಿ ಎದ್ದು ಭೂಮಿಯನ್ನು ತುಳಿಯುತ್ತಿರುವುದಕ್ಕಾಗಿ, ಅದರ ಕ್ಷಮೆ ಕೋರುತ್ತದೆ: **ಸಮುದ್ರವಸನೇ ಪೃಥ್ವೀ ಪರ್ವತಸ್ತನ ಮಂಡಲೇ । ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವ ಮೇ** – "ಪರ್ವತಗಳನ್ನೇ ಸ್ತನಗಳನ್ನಾಗಿಯೂ ಸಮುದ್ರವನ್ನೇ ಬಟ್ಟೆಯನ್ನಾಗಿಯೂ ಹೊಂದಿರುವ ವಿಷ್ಣುಪತ್ನಿಯಾದ ಭೂತಾಯಿಯೇ, ನಿನ್ನನ್ನು ನನ್ನ ಪಾದಗಳಿಂದ ಸ್ಪರ್ಶಿಸುತ್ತಿರುವುದಕ್ಕೆ ದಯವಿಟ್ಟು ನನ್ನನ್ನು ಕ್ಷಮಿಸು."

ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಭೂಮಿಯನ್ನು ತುಳಿಯುವುದರ ಜೊತೆಗೆ ಅದರ ಜೀವವನ್ನೂ ನಾವು ಬಗೆದುಹಾಕುತ್ತಿದ್ದೇವೆ. ಮಗು ಹಸಿದಾಗ ತಾಯಿಯನ್ನು ಅರಸುತ್ತದೆ; ತಾಯಿ ನೀಡುವ ಅಮೃತಪಾನದಿಂದ ಪುಷ್ಟಿ ಪಡೆದು ಆರೋಗ್ಯಪೂರ್ಣವಾಗಿ ಬೆಳೆಯುತ್ತದೆ. ಹಸಿವೆಯೆಂದು ತಾಯಿಯ ಒಡಲನ್ನೇ ಬಗೆಯುವುದಿಲ್ಲ. ನಮ್ಮ ಪ್ರಕೃತಿಯ ಸಂಬಂಧ ತಾಯಿ–ಮಗುವಿನಂತಿರಬೇಕೆಂದು ಪ್ರಪಂಚದ ಮಕ್ಕಳು, Rescue Mission : Planet Earth ಗ್ರಂಥದ ಮೂಲಕ ಸೂಚಿಸಿದ್ದಾರೆ. "ಪ್ರಕೃತಿ ನಮ್ಮೆಲ್ಲರ ಅಗತ್ಯಗಳನ್ನು ಮಾತ್ರ ಪೂರೈಸಬಲ್ಲದು, ನಮ್ಮ ದುರಾಸೆಗಳನ್ನಲ್ಲ" ಎಂಬ ಗಾಂಧೀಜಿಯವರ ಮಾತನ್ನೇ ೧೦೦ ದೇಶಗಳ ೧೦,೦೦೦ ಪುಟಾಣಿಗಳು ಬೇರೊಂದು ರೀತಿಯಲ್ಲಿ ಹೇಳಿದ್ದಾರೆ. ಆದರೆ ಸ್ವಾರ್ಥ, ಸ್ವಹಿತದೃಷ್ಟಿ, ಸಂಕುಚಿತ ಮನೋಭಾವಗಳಿಂದ ಸುಖಲೋಲುಪತೆಯ ದಾರಿಯಲ್ಲಿ ಕಣ್ಮುಚ್ಚಿ ಧಾವಿಸುತ್ತಿರುವ ಜನರ ಗದ್ದಲದ ನಡುವೆ, ವಿವೇಕದಿಂದ ಕೂಡಿದ ಮುದ್ದುಮಕ್ಕಳ ಮಾತು ಎಷ್ಟು ಮಂದಿಗೆ ತಾನೇ ಕೇಳಿಸೀತು? •

## ಈ ವರ್ಷದ ವಿಶ್ವ ಪರಿಸರ ದಿನಾಚರಣೆಗೆ ಭಾರತದ ಆತಿಥ್ಯ

ಈ ವರ್ಷದ (2011) ವಿಶ್ವ ಪರಿಸರ ದಿನಾಚರಣೆಯ ಜಾಗತಿಕ ಆತಿಥ್ಯ ವಹಿಸುವ ಗೌರವ ಭಾರತಕ್ಕೆ ದೊರಕಿದೆ. ವಿಶ್ವ ಪರಿಸರ ದಿನಾಚರಣೆಯ ಆತಿಥ್ಯವನ್ನು ಭಾರತ ವಹಿಸುತ್ತಿರುವುದು ಇದೇ ಮೊದಲನೇ ಬಾರಿ. ವಿಶ್ವ ಪರಿಸರ ದಿನಾಚರಣೆಯ ಆತಿಥ್ಯವನ್ನು ಯಾವ ರಾಷ್ಟ್ರ ವಹಿಸಬೇಕು ಎಂಬುದನ್ನು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ UNEP (United Nations Environment Programme) ನಿರ್ಣಯಿಸುತ್ತದೆ. ಜನಸಂಖ್ಯೆ ದೃಷ್ಟಿಯಿಂದ ಭಾರತ ವಿಶ್ವದಲ್ಲಿ ಎರಡನೇ ದೊಡ್ಡ ರಾಷ್ಟ್ರ. ಆರ್ಥಿಕಾಭಿವೃದ್ಧಿಯ ಮುಂಚೂಣಿಯಲ್ಲಿರುವ ಭಾರತ ಹಸಿರು ಆರ್ಥಿಕತೆಯ ಕಡೆಗೆ ದಾಪುಗಾಲು ಹಾಕುತ್ತಿದೆ. ಅಭಿವೃದ್ಧಿಯ ಸಂಕ್ರಮಣಾವಸ್ಥೆಯಲ್ಲಿರುವ ಭಾರತಕ್ಕೆ ವಿಶ್ವ ಪರಿಸರ ದಿನಾಚರಣೆಯ ಆತಿಥ್ಯ ವಹಿಸುವ ಗೌರವ ದೊರಕಿರುವುದು ಯುಕ್ತವಾಗಿಯೇ ಇದೆ. ವಿಶ್ವ ಪರಿಸರ ದಿನಾಚರಣೆಯ 40 ವರ್ಷಗಳ ಇತಿಹಾಸದಲ್ಲಿ ಭಾರತದ ನಾಗರಿಕರು ಮತ್ತು ಜನ ಸಮುದಾಯ ಹಲವು ವಿಧಾಯಕ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಅತ್ಯಧಿಕ ಕ್ರಿಯಾಶೀಲತೆ ತೋರುತ್ತಾ ಬಂದಿರುವುದರಿಂದ, ಕ್ಷಿಪ್ರ ಗತಿಯ ಆರ್ಥಿಕಾಭಿವೃದ್ಧಿ ಪಥದಲ್ಲಿರುವ ಭಾರತ 2011ರ ಪರಿಸರ ದಿನಾಚರಣೆಯ ಆತಿಥ್ಯ ವಹಿಸುವುದು ಅತ್ಯಂತ ಯುಕ್ತವಾಗಿದೆ ಎಂದು UNEP ಯ ಕಾರ್ಯನಿರ್ವಾಹಕ ನಿರ್ದೇಶಕ ಅಷಿಮ್ ಸ್ಟೈನರ್ ಹೇಳಿದ್ದಾರೆ. ಬನ್ನಿ, ಈ ವರ್ಷದ ಪರಿಸರ ದಿನಾಚರಣೆಯನ್ನು ಇನ್ನಷ್ಟು ಅರ್ಥಪೂರ್ಣವಾಗಿ ಆಚರಿಸೋಣ. ನಮ್ಮ ಪರಿಸರವನ್ನು ಸಂರಕ್ಷಿಸುವುದಕ್ಕೆ ಪಣ ತೊಡೋಣ